ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿ.ಟಿ.ಇ/ಎನ್‌ಎಸ್‌ಎಸ್/1/ಐಡಿಪಿ/2023-24

ಆಯುಕ್ತರವರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ:22.01.2024

**ಸುತ್ತೋಲೆ**

ವಿಷಯ: "ನನ್ನ ಸಂಸ್ಥೆಯ ಅಭಿವೃದ್ಧಿ ನನ್ನ ಜವಬ್ದಾರಿ" ಎಂಬ ಧ್ಯೇಯದೊಂದಿಗೆ ಪ್ರತಿ ತಿಂಗಳು 3ನೇ ಶನಿವಾರದಂದು ಶ್ರಮದಾನದ ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1) ರಾಜ್ಯಎನ್.ಎಸ್.ಎಸ್.ಅಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ ರಾಸೇಯೋ /57/ 2021/2023-24/311 ದಿನಾಂಕ: 06.10.2023
2) ಇಲಾಖೆಯ ರಾ.ಸೇ.ಯೋ ಸಲಹಾ ಸಮಿತಿ ಸಭೆಯ ನಡವಳಿ ದಿನಾಂಕ:30.10.2023
3) ಇಲಾಖಾ ಸುತ್ತೋಲೆಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24 ದಿನಾಂಕ:06.11.2023
4) ಇಲಾಖಾ ಸುತ್ತೋಲೆಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24 ದಿನಾಂಕ:16.12.2023

*****

ರಾಷ್ಟ್ರೀಯ ಸೇವಾ ಯೋಜನೆಯ ಮೂಲಕ ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳು ತೋರಿದ ಕಾರ್ಯದಕ್ಷತೆಗೆ 2021-22 ನೇ ಸಾಲಿನ ಅತ್ಯುತ್ತಮ ಇಲಾಖೆ ಮತ್ತು ಸಂಸ್ಥೆಗೆ ತಾಂತ್ರಿಕ ಶಿಕ್ಷಣ ಇಲಾಖೆ ಮತ್ತು ಸರ್ಕಾರಿ ಪಾಲಿಟೆಕ್ನಿಕ್ ರಾಯಚೂರು ಸಂಸ್ಥೆಗಳು ಘನತೆವೆತ್ತ ರಾಜ್ಯಪಾಲರಿಂದ ರಾಜ್ಯಮಟ್ಟದ ಪ್ರಶಸ್ತಿಗೆ ಉಲ್ಲೇಖ (01) ರಂತೆ ಭಾಜನವಾಗಿವೆ, ಈ ಸಾಧನೆಗೈಯಲು ಇಲಾಖೆ ವ್ಯಾಪ್ತಿಗೊಳಪಡುವ ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಕೊಡುಗೆ ಅಪಾರ.

ಈ ಸಾಧನೆಯನ್ನು ಮುಂದುವರಿಸುವ ಮತ್ತು ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಪ್ರಾಚಾರ್ಯರು, ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಪ್ರತಿ ತಿಂಗಳು ಮೂರನೇ ಶನಿವಾರದಂದು ಒಂದು ಗಂಟೆಗಳ ಕಾಲ ಶ್ರಮದಾನದ ಮೂಲಕ ಸಂಸ್ಥೆಯ ಆವರಣವನ್ನು ಶುಚಿಯಾಗಿರಿಸಿಕೊಳ್ಳಲು ಉಲ್ಲೇಖ (02-04) ರಂತೆ ಈಗಾಗಲೇ ಸೂಚಿಸಲಾಗಿದೆ.

1) ಸದರಿ ಸೂಚನೆಯನ್ವಯ ಕಾಲೇಜಿನ ಪ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಬೋಧಕ, ಬೋಧಕೇತರ ಮತ್ತು ವಿದ್ಯಾರ್ಥಿಗಳನ್ನೊಳಗೊಂಡ ಐದು ತಂಡಗಳನ್ನು ಸಂಸ್ಥೆಯಲ್ಲಿ ರಚಿಸಿ ಕಟ್ಟಡದ ಒಳ ಮತ್ತು ಹೊರ ಆವರಣವನ್ನು ಹಾಗೂ ಖಾಲಿ ಪ್ರದೇಶವನ್ನು ಐದು ಭಾಗಗಳಾಗಿ ವಿಂಗಡಿಸಿ ಸದರಿ ತಂಡಗಳ ಸುಪರ್ದಿಗೆ ಮೇಲುಸ್ತುವಾರಿಗಾಗಿ ವಹಿಸುವುದು.
2) ಹಂಚಿಕೆ ಮಾಡಲಾದ ಕಟ್ಟಡದ ಒಳ ಮತ್ತು ಹೊರ ಆವರಣವದ ಭಾಗಗಳನ್ನು ಶುಚಿಯಾಗಿಟ್ಟುಕೊಳ್ಳುವ ಮತ್ತು ವಿವಿಧ ತಂಡಗಳಿಗೆ ಮೇಲುಸ್ತುವಾರಿ ಮಾಡುವ ಜವಾಬ್ದಾರಿಯನ್ನು ಆಯಾ ತಂಡಗಳೇ ನಿಭಾಯಿಸುವುದು.
3) ಪ್ರತಿ ತಿಂಗಳ ಮೂರನೇ ಶನಿವಾರದಂದು ಒಂದು ಗಂಟೆಯ ಕಾಲದ ಶ್ರಮದಾನದ ನಂತರ ಭಾಗವಹಿಸಿದ ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಲಘು ಉಪಹಾರದ ವ್ಯವಸ್ಥೆಗಾಗಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯವರು ಸ್ವಯಂ ಪ್ರೇರಿತರಾಗಿ ವ್ಯವಸ್ಥೆ ಮಾಡುವುದು. ದಾನ ನೀಡಲು ಇಚ್ಛಿಸುವ ಸಿಬ್ಬಂದಿಗಳಿಂದ/ಹಳೆಯ ವಿದ್ಯಾರ್ಥಿಗಳ ಸಮೂಹದಿಂದ ಅಥವಾ ಸಂಸ್ಥೆಯ ಹಿತಚಿಂತಕರಿಂದ ಸಹಾಯವನ್ನು ಪಡೆಯಬಹುದಾಗಿದೆ.

4) ಶ್ರಮದಾನದ ಹೆಸರಿನಲ್ಲಿ ಭಾಗೀಯಾಗುವ ವಿದ್ಯಾರ್ಥಿಗಳ ಹಾಗೂ ಎಲ್ಲಾ ಸಿಬ್ಬಂದಿಗಳ ಕನಿಷ್ಠ ಘನತೆಗೆ ಕುಂದು ಬರುವಂತಹ ಯಾವುದೇ ಕೆಲಸ ಕಾರ್ಯಗಳನ್ನು ಮಾಡಿಸದಂತೆ ಕ್ರಮವಹಿಸುವುದು ಆಯಾ ಸಂಸ್ಥೆಯ ಪ್ರಾಚಾರ್ಯರ ಮತ್ತು ಎಲ್ಲಾ ಸಿಬ್ಬಂದಿವರ್ಗದವರ ಜವಾಬ್ದಾರಿಯಾಗಿರುತ್ತದೆ.

5) ದೈನಂದಿನ ಶುಚಿತ್ವವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಗೆ ತಾಂತ್ರಿಕ ಜ್ಞಾನದೊಂದಿಗೆ ಹೊಸ ವಿಚಾರಗಳಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಗುಂಪು ಚರ್ಚೆಗಳನ್ನು ಆಯೋಜಿಸಿ ಸಂಸ್ಥೆಯ ಆವರಣವನ್ನು ಶುಚಿಯಾಗಿರಿಸುವಂತೆ ನಿರ್ವಹಿಸಲು ಕ್ರಮಕೈಗೊಳ್ಳುವುದು.

6) ಸಂಸ್ಥೆಯ ಆವರಣವನ್ನು ಹಸಿರು ಮತ್ತು ಸ್ವಚ್ಛವಾಗಿಡಲು ಬೇಕಾಗುವ ಯಂತ್ರೋಪಕರಣಗಳನ್ನು ಮತ್ತು ಇತರೆ ಸಲಕರಣೆಗಳನ್ನು ಸಂಸ್ಥೆಯ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಅಭಿವೃದ್ಧಿ ಪಡಿಸಿ ಬಳಸಲು ಕ್ರಮವಹಿಸಿ ಅವುಗಳನ್ನು ದಿನ ಕಳೆದಂತೆ ಇನ್ನೂ ಹೆಚ್ಚು ಸಶಕ್ತವಾಗುವಂತೆ ಅಭಿವೃದ್ಧಿಪಡಿಸುವುದು.

7) ಪ್ರತಿ ತಿಂಗಳು ಮೂರನೆ ಶನಿವಾರದ ಅವಧಿಯಲ್ಲಿ ಶ್ರಮದಾನದ ಮೊದಲು ಮತ್ತು ಶ್ರಮದಾನದ (Before & After) ನಂತರದ ಛಾಯಾಚಿತ್ರಗಳನ್ನು ಸಂಸ್ಥೆಯ ಜಾಲತಾಣದಲ್ಲಿ ಪ್ರಚುರ ಪಡಿಸುವುದು.

8) ಸಂಸ್ಥೆಯಯನ್ನು ಶುಚಿಯಾಗಿಟ್ಟುಕೊಳ್ಳುವ ನಿಟ್ಟಿನಲ್ಲಿ ಉತ್ತಮ ಅಭ್ಯಾಸಗಳನ್ನು (Best Practices) ಅಳವಡಿಸಿಕೊಂಡು ಜಾಲತಾಣಗಳಲ್ಲಿ ಪ್ರಕಟಿಸುವುದು.

9) ಸಂಸ್ಥೆಯ ಸ್ವಚ್ಛತೆಗೆ ನೀಡಿರುವ ಆಧ್ಯತೆಗೆ ಮತ್ತು ನಿರ್ವಹಿಸಲು ಕೈಗೊಂಡ ಕ್ರಮಗಳನ್ನು ಪ್ರಚುರ ಪಡಿಸುವ ಮೂಲಕ ಈ ಕ್ರಮಗಳನ್ನು ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಅಳವಡಿಸಿಕೊಳ್ಳಲು ಪ್ರೇರಪಿಸುವ ನಿಟ್ಟಿನಲ್ಲಿ ನಿಮ್ಮ ಸಂಸ್ಥೆಯು ಹೆಸರು ಮಾಡಲು ಸಹಕರಿಸುವುದು.

10) ಸಂಸ್ಥೆಯ ಶ್ರಮದಾನದಲ್ಲಿ ಸ್ವಚ್ಛತೆಯ ಗುಣಮಟ್ಟ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಎಲ್ಲರೂ ಸ್ವಯಂ ಪ್ರೇರಿತವಾಗಿ ಭಾಗವಹಿಸುವುದು.

11) ರಾಷ್ಟ್ರೀಯ ಮಾನ್ಯತಾ ಮಂಡಳಿ NBA ಯಿಂದ ಮಾನ್ಯತೆ ಪಡೆಯುವ ನಿಟ್ಟಿನಲ್ಲಿ ಸಂಸ್ಥೆಯ ಸಮಸ್ತ ನಿಬ್ಬಂದಿಗಳು ಶ್ರಮದಾನದ ಮೂಲಕ ಕಾರ್ಯಪ್ರವೃತ್ತರಾಗಿ ತಮ್ಮನ್ನು ತೊಡಗಿಸಿಕೊಳ್ಳುವುದು.

12) "ನನ್ನ ಸಂಸ್ಥೆಯ ಅಭಿವೃದ್ಧಿ ನನ್ನ ಜವಬ್ದಾರಿ" ಎಂಬ ಧ್ಯೇಯದೊಂದಿಗೆ ಸಂಸ್ಥೆಯ ಅಭಿವೃದ್ಧಿಗೆ ಶ್ರಮಿಸುವವರನ್ನು ಮತ್ತು ಸಂಸ್ಥೆಗಳನ್ನು ಗುರುತಿಸಿ ಇಲಾಖಾ ಮಟ್ಟದಲ್ಲಿ ಗೌರವಿಸಲಾಗುವುದು.

-:ಶ್ರಮದಾನ-ಸ್ವಚ್ಛತೆ – ನೈರ್ಮಲ್ಯ:-

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ಪ್ರಾಂತೀಯ ನಿರ್ದೇಶಕರು, ಭಾರತ ಸರ್ಕಾರದ ರಾ.ಸೇ.ಯೋ ಪ್ರಾಂತೀಯ ಕೇಂದ್ರ, ಬಸವನಗುಡಿ ಬೆಂಗಳೂರು-ಇವರ ಮಾಹಿತಿಗೆ
3. ಇ – ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.